# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **182 (249)** |
| **ಸದಸ್ಯರ ಹೆಸರು** | **ಶ್ರೀ. ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ವಿಷಯ** | **ವಿಕಲಚೇತನರಿಗೆ ನೀಡಲಾಗುವ ಮಾಸಾಸನದಲ್ಲಿ ತಾರತಮ್ಯತೆ ಕುರಿತು** |
| **ಉತ್ತರಿಸಬೇಕಾದ ದಿನಾಂಕ** | 14.09.2021 |
| **ಉತ್ತರಿಸುವ ಸಚಿವರು** | **ಕಂದಾಯ ಸಚಿವರು** |
| **ಪ್ರಶ್ನೆ** | **ಉತ್ತರ** |
| ಅ).ಅಂಗವಿಕಲತೆಯ ಪ್ರಮಾಣವನ್ನಾಧರಿಸಿ ರಾಜ್ಯದಲ್ಲಿ ವಿಕಲಚೇತನರಿಗೆ ನೀಡುತ್ತಿರುವ ಮಾಶಾಸನದಲ್ಲಿ ತಾರತಮ್ಯ ಎಸಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅಂಗವಿಲಕ ಯೋಜನೆಯಡಿ ಸರ್ಕಾರದ ಆದೇಶ ಸಂಖ್ಯೆ: ಕಂಇ/39/ಎಮ್ ಎಸ್.ಟಿ/2021 ದಿನಾಂಕ:31/07/2021) ರಂತೆ ಅಂಗವಿಕಲತೆ ಪ್ರಮಾಣ ಆಧಾರಿಸಿ ಶೇ.40-74 ಅಂಗವಿಕಲರಿಗೆ ರೂ.800 ಹಾಗೂ ಶೇ.75 ಮೇಲ್ಪಟ್ಟ ಅಂಗವಿಕಲರಿಗೆ ರೂ.1400/- ಮಾಸಿಕ ಪಿಂಚಣಿ ನೀಡಲಾಗುತ್ತಿದೆ. |
| ಆ).ತಾರತಮ್ಯ ಸರಿಪಡಿಸಿ ಎಲ್ಲಾ ವಿಕಲಚೇತನರಿಗೂ ಏಕರೂಪ ಮಾಶಾಸನ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ; | ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ |
| ಇ).ಇತರ ರಾಜ್ಯಗಳಿಗೆ ಹೋಲಿಸಿದಲ್ಲಿ, ನಮ್ಮ ರಾಜ್ಯದಲ್ಲಿ ಕಡಿಮೆ ಇರುವ ಸದರಿ ಮಾಶಾಸನವನ್ನು ಹೆಚ್ಚಿಸಲು ಸರ್ಕಾರದ ಯೋಜನೆ ರೂಪಿಸಿದೆಯೇ; | ಅಂಗವಿಲಕ ಯೋಜನೆಯಡಿ (ಆದೇಶ ಸಂಖ್ಯೆ: ಕಂಇ/39/ಎಮ್ ಎಸ್.ಟಿ/2021 ದಿನಾಂಕ:31/07/2021) ರಂತೆ ಶೇ.40 ಅಂಗವಿಕಲತೆ ಹೊಂದಿರುವವರಿಗೆ ಮಾಸಿಕ ಪಿಂಚಣಿಯನ್ನು ರೂ.600/-ರಿಂದ ರೂ.800 ಕ್ಕೆ ಹೆಚ್ಚಿಸಲಾಗಿದೆ.<br><br>ಮುಂದುವರೆದು, ಬುದ್ಧಿಮಾಂದ್ಯರ ಆರೈಕೆ ಮಾಡಲು ಅನುವಾಗುವಂತೆ ಶೇ.75 ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿರುವವರಿಗೆ ಪ್ರಸ್ತುತ ಮಾಸಿಕ ರೂ.1400/-ರಿಂದ ರೂ.2000/- ಮಾಶಾಸನ ಹೆಚ್ಚಳ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |
| ಈ).ರಾಜ್ಯದಲ್ಲಿರುವ ಎಲ್ಲಾ ಬಗೆಯ ವಿಕಲಚೇತನರ ಒಟ್ಟು ಸಂಖ್ಯೆ ಎಷ್ಟು; (ವಾರ್ಷಿಕ ಮಾಶಾಸನದ ವಿವರ ನೀಡುವುದು) | ಅಂಗವಿಲಕ ಪಿಂಚಣಿ ಯೋಜನೆಯಡಿ ಶೇ.40 ಅಂಗವಿಕಲತೆ ಹೊಂದಿರುವ 364502 ಫಲಾನುಭವಿಗಳಿಗೆ ಮಾಸಿಕ ರೂ.800 ಹಾಗೂ ಶೇ.75 ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವ 503577 ಫಲಾನುಭವಿಗಳಿಗೆ ಮಾಸಿಕ ರೂ.1400/- ಹೀಗೆ ಒಟ್ಟು 868079 ಫಲಾನುಭವಿಗಳಿಗೆ ಅಂಗವಿಕಲ ಮಾಶಾಸನ ನೀಡಲಾಗುತ್ತಿದೆ. |
| ಉ).ಬೆಳಗಾವಿ ಜಿಲ್ಲೆಯಲ್ಲಿರುವ ಎಲ್ಲಾ ಬಗೆಯ ವಿಕಲಚೇತನರ ವಿವರ ಹಾಗೂ ವಾರ್ಷಿಕ ಮಾಶಾಸನದ ವಿವರ ನೀಡುವುದು? | ಬೆಳಗಾವಿ ಜಿಲ್ಲೆಯಲ್ಲಿ ಅಂಗವಿಲಕ ಪಿಂಚಣಿ ಯೋಜನೆಯಡಿ ಶೇ.40 ಅಂಗವಿಕಲತೆ ಹೊಂದಿರುವ 30980 ಫಲಾನುಭವಿಗಳಿಗೆ ಹಾಗು ಶೇ.75 ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವ 52345 ಫಲಾನುಭವಿಗಳಿಗೆ ಹೀಗೆ ಒಟ್ಟು 83325 ಫಲಾನುಭವಿಗಳಿಗೆ ಅಂಗವಿಕಲ ಮಾಶಾಸನ ನೀಡಲಾಗುತ್ತಿದೆ. |

**ಸಂಖ್ಯೆ: DSSP-LALC/LCQ/19/2021**

(ಆರ್.ಅಶೋಕ)
**ಕಂದಾಯ ಸಚಿವರು**